ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

41ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಇನ್ನು ಮುಂದೆ ಪಾಸ್‌ಪೋರ್ಟ್ ಅಧಿಕೃತ ಅಡ್ರೆಸ್ ಪ್ರೂಫ್ ಅಲ್ಲ

ಕೇಂದ್ರ ಸರ್ಕಾರ ಪಾಸ್‌ಪೋರ್ಟ್‌ನಲ್ಲಿ ಕೆಲ ಬದಲಾವಣೆ ತರಲು ಮುಂದಾಗಿದ್ದು , ಇನ್ನು ಮುಂದೆ ಭಾರತೀಯರು ಅದನ್ನು ಅಧಿಕೃತ ಅಡ್ರೆಸ್ ಪ್ರೂಫ್ ಆಗಿ ಬಳಸಲು ಸಾಧ್ಯವಾಗುವುದಿಲ್ಲ. ಈ ಸಂಬಂಧ ವಿದೇಶಾಂಗ ಸಚಿವಾಲಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ನಾಗರಿಕರ ಮಾಹಿತಿ ರಕ್ಷಣೆಗಾಗಿ ಮುಂದಿನ ಸರಣಿಯ ಪಾಸ್‌ಪೋರ್ಟ್‌ಗಳ ಕೊನೆ ಪೇಜ್‌ನಲ್ಲಿ ವಿಳಾಸ ಮುದ್ರಿಸದಂತೆ ಸೂಚಿಸಿದೆ. ಹೊಸ ಪಾಸ್‌ಪೋರ್ಟ್‌ನಲ್ಲಿ ವಿಳಾಸ ತೆಗೆದು ಹಾಕಲಾಗುತ್ತಿದ್ದು, ಬಣ್ಣ ಸಹ ಬದಲಿಸಲಾಗುತ್ತಿದೆ.



ಭಾರತದ ಟೆಕ್ಕಿ ಶ್ರೀನಿವಾಸ್ ಪತ್ನಿಗೆ ಟ್ರಂಪ್ ಆಹ್ವಾನ

ಜನಾಂಗೀಯ ದ್ವೇಷಕ್ಕೆ ಬಲಿಯಾದ ಭಾರತದ ಟೆಕ್ಕಿ ಶ್ರೀನಿವಾಸ ಕುಚಿಭೋಟ್ಲಾ ಅವರ ವಿಧವಾ ಪತ್ನಿ ಸುನಯನಾ ದುಮಾಲಾ ಅವರನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಥಮ ಸಮುದಾಯ ಸಭೆ ಭಾಷಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಕಳೆದ ವರ್ಷ ಅಮೆರಿಕದ ಒಲಾಥೆ ನಗರದಲ್ಲಿ ಅಮೆರಿಕದ ನೌಕಾಪಡೆ ನಿವೃತ್ತ ಯೋಧನೊಬ್ಬ ಕುಚಿಭೋಟ್ಲಾ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಿದ್ದ.

ಜಗತ್ತಿನ ಬಲಿಷ್ಠ ನಾಯಕರನ್ನು ಹಿಂದಿಕ್ಕಿದ ಮೋದಿ 3ನೇ ಜಾಗತಿಕ ನಾಯಕ

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾ ಅಧ್ಯಕ್ಷ ಜಿನ್ ಪಿಂಗ್‌ರನ್ನು ಹಿಂದಿಕ್ಕಿ ಮೂರನೇ ಜಾಗತಿಕ ನಾಯಕನಾಗಿ ಹೊರಹೊಮ್ಮಿದ್ದಾರೆ. ಜನಪ್ರಿಯ ಜಾಗತಿಕ ನಾಯಕರ ಸಮೀಕ್ಷೆಯನ್ನು ಗ್ಯಾಲಪ್ ಇಂಟರ್ ನ್ಯಾಷನಲ್ ಸಂಸ್ಥೆ ನಡೆಸಿದ್ದು , ಇದರಲ್ಲಿ ಪ್ರಧಾನಿ ಮೋದಿ ಅವರು ಮೂರನೇ ಸ್ಥಾನ ಪಡೆದಿದ್ದಾರೆ. ಈ ಮೂಲಕ ಮೋದಿ ಜಗತ್ತಿನ ಪ್ರಬಲ ನಾಯಕರನ್ನು ಹಿಂದಿಕ್ಕಿ ಗಮನ ಸೆಳೆದಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :52 ಶನಿವಾರ ಜ.13, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20

ಅಕ್ರಮ ಮರಳು ಸಾಗಣೆ : ಟ್ರ್ಯಾಕ್ಟರ್‌ಗಳ ವಶ-ಇಬ್ಬರ ಸೆರೆ

ಆಲೂರು : ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಎರಡು ಟ್ರಾಕ್ಟರ್‌ಗಳನ್ನು ಆಲೂರು-ಮಗ್ಗೆ ರಸ್ತೆಯ ಧರ್ಮಪುರಿ ಗ್ರಾಮದ ಬಳಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪೊಲೀಸರು ಗುರುವಾರ ಬೆಳಗಿನ ಜಾವ ಗಸ್ತಿನಲ್ಲಿದ್ದಾಗ ಪರವಾನಗಿ ಇಲ್ಲದ ಕೆಎ-46, ಟಿ-4339 ಹಾಗೂ ಕೆಎ-46, ಟಿ-4340 ನಂಬರಿನ ಎರಡು ಟ್ರಾಕ್ಟರ್‌ಗಳಲ್ಲಿ ಅಕ್ರಮವಾಗಿ ಮರಳು ಸಾಗಿಸಲಾಗುತ್ತಿತ್ತು.

ಈ ವೇಳೆ ಕಾರ್ಯಪ್ರವೃತ್ತರಾದ ಪೊಲೀಸರು ಟ್ರಾಕ್ಟರ್‌ಗಳನ್ನು ವಶಪಡಿಸಿಕೊಂಡಿದ್ದು , ಚಾಲಕರಾದ ಕೆ.ಹೊಸಕೋಟೆ ಹೋಬಳಿಯ ಕಿತ್ತನಗೆರೆ ಗ್ರಾಮದ ಶರತ್ (25), ವಿಶ್ವಾಸ್ (19) ಎಂಬುವವರನ್ನು ಬಂಧಿಸಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು , ಮುಂದಿನ ತನಿಖೆ ಕೈಗೊಳ್ಳಲಾಗಿದೆ.

ನ್ಯಾಯಾಂಗ ವ್ಯವಸ್ಥೆ ಕುರಿತು ಅಸಮಾಧಾನ

ಇದೇ ಮೊದಲ ಬಾರಿಗೆ 'ಸುಪ್ರೀಂ' ನ್ಯಾಯಮೂರ್ತಿಗಳಿಂದ ಸುದ್ದಿಗೋಷ್ಠಿ

ನವದೆಹಲಿ : ಭಾರತದ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ 'ಸುಪ್ರೀಂ ಕೋರ್ಟ್' ನ್ಯಾಯಮೂರ್ತಿಗಳು ಸುದ್ದಿಗೋಷ್ಠಿಯನ್ನು ನಡೆಸಿದ್ದು, ನ್ಯಾಯಾಂಗ ವ್ಯವಸ್ಥೆ ಕುರಿತು ಅಸಮಾಧಾನವನ್ನು ಹೊರ ಹಾಕಿದ್ದಾರೆ.

ನ್ಯಾಯಮೂರ್ತಿಗಳಾದ ಚೆಲ್ಮೇಶ್ವರ್, ರಂಜನ್ ಗೊಗೋಯಿ, ಮದನ್ ಲೋಕೂರ್ ಹಾಗೂ ಕುರಿಯನ್ ಜೋಸೆಫ್ ಅವರು ಶುಕ್ರವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ್ದಾರೆ.

ಪತ್ರಿಕಾಗೋಷ್ಠಿ ನಡೆಸುವ ನಿರ್ಧಾರವನ್ನು ನ್ಯಾಯಮೂರ್ತಿ ಚೆಲ್ಮೇಶ್ವರ್ ಅವರು ತೆಗೆದುಕೊಂಡಿದ್ದು, ತಮ್ಮ ನಿವಾಸದ ಆವರಣದಲ್ಲಿಯೇ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಅವರು, ನ್ಯಾಯಾಂಗ ವ್ಯವಸ್ಥೆ ಕುರಿತು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನ್ಯಾಯಾಂಗ ವ್ಯವಸ್ಥೆ ಕುರಿತು ಸಿಜೆಐ ದೀಪಕ್ ಮಿಶ್ರಾ ಅವರಿಗೆ ಬರೆಯಲಾಗಿರುವ ಪತ್ರಕ್ಕೆ ನಾಲ್ವರು ನ್ಯಾಯಾಧೀಶರು ಸಹಿ ಮಾಡಿದ್ದು , ಪತ್ರದಲ್ಲಿರುವ ಸಾರಾಂಶವನ್ನು ಶುಕ್ರವಾರ ನ್ಯಾಯಾಧೀಶರು ಬಹಿರಂಗಪಡಿಸಿದ್ದಾರೆ.

ನ್ಯಾಯಾಂಗ ವ್ಯವಸ್ಥೆಯಲ್ಲಿ ಸೃಷ್ಟಿಯಾಗಿರುವ ಸಮಸ್ಯೆಗಳನ್ನು ಹಿಡಿದು ಸಿಜೆಐಗಳ ಮುಂದೆ ಹೋಗಿದ್ದೆವು. ಆದರೆ ಅದರಿಂದ ಯಾವುದೇ ಪ್ರಯೋಜನವಾಗಲಿಲ್ಲ, ಸಿಜೆಐಗೆ ಮನವರಿಕೆ ಮಾಡಲು ಸಾಧ್ಯವಾಗಿಲ್ಲ. ಹೀಗಾಗಿ ನಮಗೆ ಬೇರಾವುದೇ ದಾರಿಯಿಲ್ಲದೆ ದೇಶದ ಜನತೆಯ ಮುಂದೆ ಬಂದಿದ್ದೇವೆಂದು ನ್ಯಾಯಮೂರ್ತಿ ಚಲ್ಮೇಶ್ವರ್ ಹೇಳಿದ್ದಾರೆ.

(-4ನೇ ಪುಟಕ್ಕೆ)

ಕ್ವಿಂ. ರಾಗಿಗೆ 2300 ರೂ. ಬೆಂಬಲ ಬೆಲೆ ನೀಡಲು ತೀರ್ಮಾನ

ಹಾಸನ : ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಸಲು ಹಾಗೂ 1 ಕ್ವಿಂಟಾಲ್ ರಾಗಿಗೆ 2300 ರೂ. ಬೆಂಬಲ ಬೆಲೆ ನೀಡಲು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಪೂರ್ಣಿಮ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

2017-18ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿಯನ್ನು ಖರೀದಿಸಲು ಖರೀದಿ ಕೇಂದ್ರಗಳನ್ನು ಹಾಸನ, ಬೇಲೂರು, ಹೊಳೆನರಸೀಪುರ, ಚನ್ನರಾಯಪಟ್ಟಣ, ಅರಸೀಕೆರೆಯ ಗಂಡಸಿ, ಜಾವಗಲ್ ಮತ್ತು ಆಲೂರಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಲ್ಲಿ ತೆರೆಯಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಹೇಳಿದರು.

ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಗೆ ಜ.12ರಿಂದ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಲಿದೆ ಎಂದು ಹೇಳಿದ ಅವರು, ರಜಾದಿನ ಹೊರತುಪಡಿಸಿ ಉಳಿದ ದಿನ ಖರೀದಿಗೆ ಅವಕಾಶವಿರುತ್ತದೆ ಎಂದು ತಿಳಿಸಿದರು.

ನೋಂದಣಿ ಸಂದರ್ಭದಲ್ಲಿ ಆಧಾರ್ ಕಾರ್ಡ್, ಆರ್.ಟಿ.ಸಿ. ಬೆಳೆ ನಮೂದು, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಗಳನ್ನು ಕಡ್ಡಾಯವಾಗಿ ತರಬೇಕು ಮತ್ತು ಆರ್.ಟಿ.ಸಿ.ಯಲ್ಲಿ ಬೆಳೆ ನಮೂದು ನೋಂದಣಿ ಆಗದೆ ಇದ್ದ ಪಕ್ಷದಲ್ಲಿ ಬೆಳೆ ದೃಢೀಕರಣ ಪತ್ರವನ್ನು ಲಗತ್ತಿಸಬಹುದಾಗಿದೆ ಎಂದು ಹೇಳಿದರು.

ರಾಗಿ ತೂಕವನ್ನು ಮಾಡಲು ವಿದ್ಯುನ್ಮಾನ ತೂಕದ ಯಂತ್ರವನ್ನು ಕಡ್ಡಾಯವಾಗಿ ಬಳಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ಬ್ಯಾನರ್‌ಗಳು ಮತ್ತು ಕರಪತ್ರಗಳ ಮೂಲಕ ರೈತರಿಗೆ ಹೆಚ್ಚಿನ ಅರಿವು ಮೂಡಿಸುವಂತೆ ತಿಳಿಸಿದರು.

(-4ನೇ ಪುಟಕ್ಕೆ)

ಯಗಚಿಗೆ ತ್ಯಾಜ್ಯ ನೀರು : ಅಗತ್ಯ ಕ್ರಮಕ್ಕೆ ನಗರಸಭೆ ಕೋರಿಕೆ

'ಜನತಾಮಾಧ್ಯಮ' ವರದಿ ಎಫೆಕ್ಟ್

ಯಗಚಿಗೆ ಹರಿಯುತ್ತಿರುವ ಒಳಚರಂಡಿ ನೀರು!

ಹಾಸನ : ಒಳಚರಂಡಿ ತ್ಯಾಜ್ಯದ ನೀರು ಯಗಚಿ ನದಿಗೆ ಹರಿಯುತ್ತಿರುವ ಸಂಬಂಧ ವೈಜ್ಞಾನಿಕವಾಗಿ ಶುದ್ಧೀಕರಿಸಲು ವಿಸ್ತೃತ ವರದಿಯನ್ನು ತಯಾರಿಸಲು ಅನುಮತಿ ನೀಡುವಂತೆ ಜಿಲ್ಲಾಧಿಕಾರಿಗಳನ್ನು ನಗರಸಭೆ ಕೋರಿದೆ.

ಓದುಗರೇ, ಇದೊಂದು ಒಳ್ಳೆಯ ಸುದ್ದಿ. ಪತ್ರಿಕೆಯ ವಿಸ್ತೃತ ವರದಿಗೆ ಅಧಿಕಾರಿ ವರ್ಗ ಗಮನ ಹರಿಸಿದೆ.

ಒಳ್ಳೆ ಸುದ್ದಿ

ಶುಕ್ರವಾರ ಜನತಾಮಾಧ್ಯಮ ಪತ್ರಿಕೆಯಲ್ಲಿ ಯಗಚಿಗೆ ಹರಿಯುತ್ತಿರುವ ಒಳಚರಂಡಿ ನೀರಿನ ವಿಸ್ತೃತ ವರದಿಗೆ ಸಂಬಂಧಿಸಿದಂತೆ ಪೌರಾಯುಕ್ತರು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದು , ವಿಸ್ತೃತ ವರದಿ ತಯಾರಿಸಲು ಕನ್ಸಲ್ಟೆಂಟ್ ಅವರನ್ನು ನೇಮಿಸಿಕೊಳ್ಳಲು, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ನಿಯಮಾನುಸಾರ ಟೆಂಡರ್ ಕರೆಯಲು ಅನುಮತಿಗೆ ಕೋರಿದ್ದಾರೆ.

ಡಿ.ಪಿ.ಆರ್. ಸಿದ್ಧಪಡಿಸಲು ತಗುಲುವ ವೆಚ್ಚವನ್ನು ನಗರಸಭೆ ನಿಧಿಯಿಂದ ಭರಿಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ವಿದ್ಯಾನಗರ ಬಡಾವಣೆ, ಜಯನಗರ ಸುತ್ತಮುತ್ತಲಿನ ಪ್ರದೇಶಗಳಿಂದ ಒಳಚರಂಡಿ ತ್ಯಾಜ್ಯದ ನೀರು ರಾಜಕಾಲುವೆ ಮೂಲಕ ಮಾಕನಕಟ್ಟೆ ಕೆರೆಯನ್ನು ಸೇರಿ ಸುತ್ತಮುತ್ತಲಿನ ಹಾಲುವಾಗಿಲು, ನಿಂಗೇಗೌಡನ ಕೊಪ್ಪಲು, ಮಾರಿಗುಡಿ ಕೊಪ್ಪಲು ಪ್ರದೇಶಗಳಲ್ಲಿ ಅನೈರ್ಮಲ್ಯ ವಾತಾವರಣ ಉಂಟಾಗಿದೆ ಎಂದು ವಿವರಿಸಿದ್ದಾರೆ.

ಸಂಸ್ಕರಿಸದೇ ಇರುವ ತ್ಯಾಜ್ಯದ ನೀರು ಮಾಕನಕಟ್ಟೆ ಕೆರೆಯನ್ನು ತುಂಬಿ ಹಾಲುವಾಗಿಲು ಹತ್ತಿರ ಯಗಚಿ ನದಿಯನ್ನು ಸೇರುತ್ತಿದೆ. ಪ್ರತಿದಿನ ಮಾಕನಕಟ್ಟೆಗೆ ಹರಿಯುವ ಕಚ್ಚಾ ತ್ಯಾಜ್ಯದ ನೀರಿನ ಪ್ರಮಾಣ 2 ರಿಂದ 3 ಎಂ.ಜಿ.ಡಿ.ಯಷ್ಟಾಗಿರುತ್ತದೆ ಎಂದು ವಿವರಿಸಿದ್ದಾರೆ.

ಸಂಗ್ರಹವಾಗುತ್ತಿರುವ ಕಚ್ಚಾ ತ್ಯಾಜ್ಯದ ನೀರನ್ನು ವೈಜ್ಞಾನಿಕವಾಗಿ ಶುದ್ಧೀಕರಿಸಲು ನಗರಸಭೆಯಿಂದ ನಿಯಮಾನುಸಾರ ಕ್ರಮ ವಹಿಸಲು ಕನ್ಸಲ್ಟೆಂಟ್ ನೇಮಿಸಿಕೊಂಡು, ಡಿ.ಪಿ.ಆರ್. ಸಿದ್ಧಪಡಿಸಿಕೊಂಡು ಅಗತ್ಯ ಕ್ರಮವನ್ನು ಕಡ್ಡಾಯವಾಗಿ ನಗರಸಭೆ ಕೈಗೊಳ್ಳಬೇಕಾಗಿದೆ ಎಂದು ಪೌರಾಯುಕ್ತರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

■ ಬಹಿಷ್ಕಾರ, ರಾಗಿ ಬೆಳೆಗೆ ಬೆಂಕಿ ಹಚ್ಚಿದ ಪ್ರಕರಣ

ದಲಿತಪರ ಸಂಘಟನೆಗಳಿಂದ ರಸ್ತೆತಡೆ

ಚನ್ನರಾಯಪಟ್ಟಣ : ತಾಲ್ಲೂಕಿನ ಮಡಬ ಗ್ರಾಮದಲ್ಲಿ ದಲಿತರಿಗೆ ಬಹಿಷ್ಕಾರ ಹಾಕಿ, ಅವರ ನಾಲ್ಕು ಎಕರೆ ರಾಗಿ ಬಣವೆಗೆ ಬೆಂಕಿ ಹಚ್ಚಿದ ಕಿಡಿಗೇಡಿಗಳನ್ನು ಶೀಘ್ರ ಬಂಧಿಸುವಂತೆ ಒತ್ತಾಯಿಸಿ ದಲಿತಪರ ಸಂಘಟನೆಗಳು ಶುಕ್ರವಾರ ಪಟ್ಟಣದಲ್ಲಿ ಧರಣಿ ನಡೆಸಿದವು.

ಪಟ್ಟಣದ ತಾಲ್ಲೂಕು ಕಛೇರಿ ಎದುರು ಅರ್ಧ ಗಂಟೆಗೂ ಹೆಚ್ಚು ಹೊತ್ತು ಧರಣಿ ನಡೆಸಿದ ಪ್ರತಿಭಟನಾಕಾರರು, ನವೋದಯ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ರಸ್ತೆತಡೆ ನಡೆಸಿದರು.

ದಲಿತ ಮುಖಂಡ ಬಡಕನಹಳ್ಳಿ ಲಕ್ಷ್ಮಣ್ ಮಾತನಾಡಿ, ಗೊಮ್ಮಟನ ನಾಡು ಎಂದು ಖ್ಯಾತಿ ಪಡೆದಿರುವ ಪಟ್ಟಣ ಶಾಂತಿ ಸೌಹಾರ್ದತೆಗೆ ಹೆಸರಾಗಿದೆ. ಕೆಲ ಒಂದು ವರ್ಗದವರು ದಲಿತರ ಮೇಲೆ ದಬ್ಬಾಳಿಕೆ ನಡೆಸುತ್ತಿರುವುದು ಖಂಡನೀಯ ಎಂದು ದೂರಿದರು.

ದಲಿತರ ಬಹಿಷ್ಕಾರಕ್ಕೆ ಸಂಬಂಧಿಸಿದಂತೆ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಜಗದೀಶ್‌ನನ್ನು ಪೊಲೀಸರು ಬಂಧಿಸಿದ್ದರು. ಹಾಗಾಗಿ ರಾಗಿ ಬಣವೆಗೆ ಬೆಂಕಿ ಹಚ್ಚಲಾಗಿದೆ ಎಂದು ತಹಸೀಲ್ದಾರ್‌ಗೆ ನೀಡಿರುವ ಮನವಿಯಲ್ಲಿ ದಲಿತಪರ ಸಂಘಟನೆಗಳು ತಿಳಿಸಿವೆ.

ಆರೋಪಿಗಳಾದ ಲೋಕೇಶ್, ಅಣ್ಣಯ್ಯ ಅವರುಗಳು ಗ್ರಾಮದ ಪಕ್ಕದ ಕೆರೆಯಲ್ಲಿರುವ ಸರ್ಕಾರಿ ಪಟೇಲರ ಕಟ್ಟೆಗೆ ಅನಧಿಕೃತವಾಗಿ ಮೀನಿನ ಮರಿಯನ್ನು ಬಿಟ್ಟು ಸಾಕಣೆ ಮಾಡುತ್ತಿದ್ದಾರೆ ಎಂದು ವಿವರಿಸಿವೆ.

ದಲಿತ ಕೋಮಿಗೆ ಸೇರಿದ ಪುಟ್ಟಸ್ವಾಮಿ ಅವರನ್ನು ಥಳಿಸಿದ್ದಾರೆ. ನಂತರ ವಿದ್ಯುತ್ ಹರಿದು ಆತ ಸಾವನ್ನಪ್ಪಿದ್ದಾನೆ ಎಂದು ಸುಳ್ಳು ಸೃಷ್ಟಿಸಲಾಗಿದೆ. ಇದು ಉದ್ದೇಶಪೂರ್ವಕವಾಗಿದೆ. ಪೊಲೀಸರು ರಾಜಕಾರಣಿಗಳ ಒತ್ತಡಕ್ಕೆ ಮಣಿದು ಪ್ರಕರಣ ಮುಚ್ಚಿ ಹಾಕುವ ಯತ್ನ ಮಾಡುತ್ತಿದ್ದಾರೆ. ಕೂಡಲೇ ಆರೋಪಿಗಳನ್ನು ಬಂಧಿಸಿ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿವೆ.

ಧರಣಿಯಲ್ಲಿ ದಲಿತಪರ ಸಂಘಟನೆಯ ವೆಂಕಟೇಶ್ ಉಳುವಾರೆ, ದಂಡೋರ ಮಂಜು, ಪ್ರಸನ್ನಕುಮಾರ್ ಇನ್ನಿತರರು ಇದ್ದರು.

ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಮುತ್ತಿಗೆ ಯತ್ನ

ಹಾಸನ : ಆರ್.ಎಸ್.ಎಸ್. ಹಾಗೂ ಭಾರತೀಯ ಜನತಾ ಪಕ್ಷದವರು ಉಗ್ರಗಾಮಿಗಳು ಎಂದು ಮುಖ್ಯಮಂತ್ರಿ ಟೀಕಿಸಿರುವ ಸಂಬಂಧ ಶುಕ್ರವಾರ ಬಿಜೆಪಿ ಕಾರ್ಯಕರ್ತರು ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ನಗರದ ಕೆ.ಆರ್.ಪುರಂನಲ್ಲಿರುವ ಜಿಲ್ಲಾ ಬಿಜೆಪಿ ಕಛೇರಿಯಿಂದ ಹೊರಟ ಪ್ರತಿಭಟನಾಕಾರರು, ಬಿ.ಎಂ.ರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಭವನಕ್ಕೆ ಆಗಮಿಸಿ ಮುಂಬಾಗಿಲ ಗೇಟನ್ನು ಹಾಕಿದರು. ಈ ವೇಳೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು.

ನಂತರ ಬಿಜೆಪಿ ಕಾರ್ಯಕರ್ತರು ಜಿಲ್ಲಾ ಕಾಂಗ್ರೆಸ್ ಕಛೇರಿ ಮುಂಭಾಗ ಧರಣಿ ನಡೆಸಿದರು. ನಂತರ ಗೇಟ್‌ನ ಒಳಗೆ ನುಗ್ಗಲು ಪ್ರಯತ್ನ ನಡೆಸಿದರು. ಆಗ ಪೊಲೀಸರು ಮಧ್ಯೆ ಪ್ರವೇಶಿಸಿ ತಡೆದರು.

(-4ನೇ ಪುಟಕ್ಕೆ)

ಬಡವ-ಶ್ರೀಮಂತರ ನಡುವಿನ ಅಂತರ ಹೆಚ್ಚಳ : ವಿಷಾದ



ಹಾಸನ : ಇಂದಿನ ದಿನಗಳಲ್ಲಿ ಶ್ರೀಮಂತ ಹಾಗೂ ಬಡವ ಎಂಬ ವ್ಯತ್ಯಾಸ ಅಗಾಧವಾಗಿ ಬೆಳೆದಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷದ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಗುಣಶೇಖರ್ ಆತಂಕ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ 3ನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲೋ ಒಂದು ಕಡೆ ಶ್ರೀಮಂತರು ಶ್ರೀಮಂತರಾಗುತ್ತಲೇ ಹೋಗುತ್ತಿದ್ದರೆ, ಇನ್ನೊಂದು ಕಡೆ ಬಡವರು ಇನ್ನೂ ಕಡು ಬಡವರಾಗಿ ಉಳಿಯುತ್ತಿದ್ದಾರೆ. ಸಣ್ಣ ಸಣ್ಣ ವ್ಯಾಪಾರಿಗಳು ಮನೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾದಿಸಿದರು.

1991ರಲ್ಲಿ ಕಾಂಗ್ರೆಸ್ ಪಕ್ಷವು ತನ್ನ ಸಮಾಜವಾದಿ ಆದರ್ಶಗಳನ್ನು ಕೈಬಿಟ್ಟು ಜಾರಿಗೆ ತಂದ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣ ನೀತಿಗಳಿಂದ ಭಾರತದ ಸಾಮಾಜಿಕತೆ ಹಾಗೂ ಆರ್ಥಿಕತೆಯಲ್ಲಿ ಅಲ್ಲೋಲ ಕಲ್ಲೋಲವನ್ನೇ ಉಂಟು ಮಾಡಿದೆ ಎಂದು ದೂರಿದರು.

ಇಂದು ದೇಶದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರಕಾರವು ಎಲ್ಲಾ ರಂಗಗಳಲ್ಲೂ ಭಾರತದ ಕುಸಿತಕ್ಕೆ ಕಾರಣವಾಗಿದೆ ಎಂದು ಆರೋಪಿಸಿದರು.

ನಿರುದ್ಯೋಗದ ಭೂತ ಬೃಹದಾಕಾರವಾಗಿ ಬೆಳೆದಿದೆ. ಕೈಗಾರಿಕಾ ರಂಗ ಇನ್ನೂ ಚೇತರಿಸಿಕೊಂಡಿಲ್ಲ, ಕೃಷಿ ಸಂಕಷ್ಟದಲ್ಲಿದ್ದು, ರೈತರು ಕಂಗಾಲಾಗಿದ್ದಾರೆ. ಬೆಲೆ ಏರಿಕೆ ಅವ್ಯಾಹತವಾಗಿ ಸಾಗುತ್ತಿದೆ. ಉತ್ಪಾದನಾ ವಲಯ ತೀರಾ ಕುಸಿದಿದೆ ಎಂದರು.

ಕಾರ್ಯಕ್ರಮಕ್ಕೂ ಮೊದಲು ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ನಗರದ ಎನ್.ಆರ್.ವೃತ್ತದಿಂದ ಸಾಹಿತ್ಯ ಪರಿಷತ್ ಭವನದವರೆಗೂ ಮೆರವಣಿಗೆ ನಡೆಸಿದರು.

ಬಿಜೆಪಿಯು ದೇಶದಲ್ಲಿರುವ ಕಪ್ಪು ಹಣವನ್ನು ವಶಪಡಿಸಿಕೊಂಡು ಪ್ರತಿಯೊಬ್ಬ ಪ್ರಜೆಯ ಖಾತೆಗೆ 15 ಲಕ್ಷ ರೂ. ಹಾಕುವುದಾಗಿ ಹೇಳಿತ್ತು. ಆದರೆ ಇದುವರೆಗೂ ಇದನ್ನು ಈಡೇರಿಸದೆ ಮಾತಿಗೆ ತಪ್ಪಿದೆ ಎಂದು ಕಿಡಿಕಾರಿದರು.

ಕಾರ್ಯಕ್ರಮದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಹ ಕಾರ್ಯದರ್ಶಿ ಸಿ.ಧರ್ಮರಾಜು, ರಾಜ್ಯ ಸಹ ಕಾರ್ಯದರ್ಶಿ ಸುಂದರೇಶ್, ಚಿಕ್ಕಮಗಳೂರು ವಿಭಾಗದ ನಾಯಕ ಬಿ.ಅಮ್ಜದ್, ಮುಖಂಡ ಎಂ.ಸಿ. ಡೋಂಗ್ರೆ ಇತರರು ಪಾಲ್ಗೊಂಡಿದ್ದರು.

ಮಸ್ತಕಾಭಿಷೇಕ : ಕಾಮಗಾರಿ ಕುರಿತು ಚರ್ಚೆ

ಹಾಸನ : ಫೆಬ್ರವರಿ ತಿಂಗಳಲ್ಲಿ ಜರುಗಲಿರುವ ಮಹಾಮಸ್ತಕಾಭಿಷೇಕದ ಹಿನ್ನೆಲೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಧೀಕ್ಷಕರಾದ ಮೂರ್ತೀಶ್ವರಿ ಅವರು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರಿಗೆ ಶುಕ್ರವಾರ ಕಾಮಗಾರಿಗಳ ವಿವರಣೆ ನೀಡಿದರು.

ಶ್ರವಣಬೆಳಗೊಳದ ವಿಂಧ್ಯಗಿರಿ ಬೆಟ್ಟದ ತಪ್ಪಲಿನಲ್ಲಿರುವ ಸ್ವಾಗತ ಕಚೇರಿಯಲ್ಲಿ ನಡೆದ ಸಭೆಯಲ್ಲಿ ವಿಂಧ್ಯಗಿರಿ ಬೆಟ್ಟದ ಮಹಾದ್ವಾರದ ಅಲಂಕಾರ ಮತ್ತು ನವೀಕರಣ, ನೆಲಹಾಸು, ಯಾತ್ರಿ ನಿವಾಸದ ಕಟ್ಟಡ ಕಾಮಗಾರಿ, ಕಲ್ಯಾಣಿಯ ಸ್ವಚ್ಛತೆ, ಬಸದಿಗಳ ಜೀರ್ಣೋದ್ಧಾರ ಹಾಗೂ ಇತರ ಕಾಮಗಾರಿಗಳ ಬಗ್ಗೆ ಅವರು ವಿವರಣೆ ನೀಡಿದರು.

ನಂತರ ಚಿಕ್ಕಬೆಟ್ಟದಲ್ಲಿ ಪ್ರವಾಸಿಗರ ಸುರಕ್ಷತೆಗೆ ಕಂಬಿಗಳು ಹಾಗೂ ಕಬ್ಬಿಣದ ತಡೆಗೋಡೆಗಳನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು.

(-4ನೇ ಪುಟಕ್ಕೆ)

ಉತ್ತರ ಕ್ರಿಯಾರಾಧನೆಗೆ ಆಹ್ವಾನ

ಶ್ರೀ ಹೆಚ್.ಎನ್.ವೆಂಕಟರಾಮು
ಜನನ:23-08-1944
ಮರಣ: 04-01-2018

ಶ್ರೀಮತಿ ಯು.ಕೆ.ನೀಲಮ್ಮ
(ನಿವೃತ್ತಪ್ರಾಂಶುಪಾಲರು,ಎ.ಎನ್.ಎಂ.ಟ್ರೈನಿಂಗ್ ಸೆಂಟರ್,ಸರ್ಕಾರಿ ಆಸ್ಪತ್ರೆ, ಹಾಸನ.)
ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ 04-1-2018ನೇ ಗುರುವಾರ ನನ್ನ ಪೂಜ್ಯಪತಿಯವರಾದ

ಶ್ರೀ ಹೆಚ್.ಎನ್.ವೆಂಕಟರಾಮು
(ಮಾಜಿ ಅಧ್ಯಕ್ಷರು,ಜಿಲ್ಲಾ ಸರ್ಕಾರಿ ನೌಕರರ ಸಂಘ,ಹಾಸನ)

ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ **"ಉತ್ತರಕ್ರಿಯಾರಾಧನೆ"ಯನ್ನು ದಿ:14-01-2018ನೇ ಭಾನುವಾರ ಮಧ್ಯಾಹ್ನ 12-30 ಹಾಸನ ನಗರದ ಗೌರಿಕೊಪ್ಪಲು ಮುಖ್ಯರಸ್ತೆಯಲ್ಲಿರುವ ಹನುಮಮ್ಮ ಚಲುವಯ್ಯ ಕನ್‌ವೆನ್‌ಷನ್ ಹಾಲ್‌ನಲ್ಲಿ** ನಡೆಸಲು ನಿಶ್ಚಯಿಸುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಬೇಕಾಗಿ ಕೋರುವ,

ದುಃಖ ಭಾಗಿಗಳು:
ಮಗ, ಸೊಸೆ, ಮೊಮ್ಮಕ್ಕಳು, ಹಾಗೂ
ಬಂಧು-ಮಿತ್ರರು

ತಮ್ಮ ವಿಶ್ವಾಸಿಗಳು,
ಶ್ರೀಮತಿ ಯು.ಕೆ.ನೀಲಮ್ಮ

ವಿ.ಸೂ. : ಆಹ್ವಾನಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ.

ನಿಂತಿದ್ದ ಬಸ್‌ಗೆ ಕಾರು ಡಿಕ್ಕಿ : ಚಾಲಕ ಸ್ಥಳದಲ್ಲೇ ಸಾವು

ಚನ್ನರಾಯಪಟ್ಟಣ : ನಿಂತಿದ್ದ ಬಸ್ಸಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನ ಚಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಉದಯಪುರ ಗ್ರಾಮದ ಬಳಿ ಶುಕ್ರವಾರ ಬೆಳಗಿನ ಜಾವ 2.30ರಲ್ಲಿ ಸಂಭವಿಸಿದೆ.

ಹಾಸನದ ರಾಜಘಟ್ಟ ನಿವಾಸಿ ದ್ಯಾವೇಗೌಡ ಎಂಬುವವರ ಪುತ್ರ ಸಚಿನ್ (23) ಮೃತಪಟ್ಟ ದುರ್ದೈವಿ.

ಪ್ರಯಾಣಿಕರನ್ನು ಸಾಗಿಸುತ್ತಿದ್ದ ಕೆ.ಎಸ್.ಆರ್.ಟಿ.ಸಿ. ಬಸ್ ಉದಯಪುರ ಬಳಿ ನಿಂತಿತ್ತು. ಈ ವೇಳೆ ವೇಗವಾಗಿ ಬಂದ ಕಾರು ಚಾಲಕ ನವೀನ್ ನಿರ್ಲಕ್ಷ್ಯತೆಯಿಂದ ಬಸ್‌ಗೆ ಡಿಕ್ಕಿ ಹೊಡೆದಿದ್ದು , ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿದಿದೆ.

JAMAL SONS
Gandhi Bazar, Hassan
Cordially invites you with family & friends to the inauguration of their Multibrand Footwear Showroom
SHOE GARDEN
At : Subhash Square, Hassan.
Dr. H.S. Anil Kumar
President, CMC, Hassan
has kindly consented to inaugurate the Showroom
On Saturday 13th January 2018
Time : 9-30 am
SG
SHOE GARDEN
WOODLAND
PUMA
Bata
Lee Cooper
LIBERTY
F sports
FILA
VKC pride
sparx